<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	505
ಸದಸ್ಯರ ಹೆಸರು	:	ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸುವ ದಿನಾಂಕ	:	24-09-2020

<table>
<tr><th>ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಲಾಕ್‌ಡೌನ್ ಸಮಯದಲ್ಲಿ ಹಲವು ಜನರು ಉದ್ಯೋಗ ಕಳೆದುಕೊಂಡಿರುವುದು ಮತ್ತು ವೇತನದ ಅರ್ಧಭಾಗವನ್ನು ಮಾತ್ರ ಪಡೆಯುತ್ತಿರುವುದು ಸರ್ಕಾರದ ಗಮನದಲ್ಲಿಯೇ;</td><td>ಹೌದು.</td></tr>
<tr><td>(ಆ)</td><td>ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು; ಸಣ್ಣ ಕೈಗಾರಿಕೆಗಳನ್ನು ಸುಧಾರಿಸಿ ಉದ್ಯೋಗಿಗಳನ್ನು ಹುರಿದುಂಬಿಸುವಂತೆ ಸರ್ಕಾರವು ಇಟ್ಟ ಹೆಜ್ಜೆಗಳೇನು;</td><td>ಕೋವಿಡ್-19 ಲಾಕ್‌ಡೌನ್ ಪರಿಣಾಮವಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಕ್ಷೇತ್ರವನ್ನು ಪುನಶ್ಚೇತನಗೊಳಿಸಲು ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ:-

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

2. ಇಂಧನ ಇಲಾಖೆಯು ವಿದ್ಯುತ್ ಬಿಲ್ ಅನ್ನು ನಿಗಧಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಠ ಮಿತಿ ರೂ.1.00 ಲಕ್ಷ, ಎಲ್‌ಟಿ ಗರಿಷ್ಠ ಮಿತಿ ರೂ.10,000/-

<table><tr><td>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 1% ರಿಯಾಯಿತಿ</td></tr><tr><td>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 0.5% ರಿಯಾಯಿತಿ</td></tr><tr><td>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ</td><td>ಯಾವುದೇ ರಿಯಾಯಿತಿ ಇರುವುದಿಲ್ಲ</td></tr></table></td></tr>
</table>

ಸಂಖ್ಯೆ	ಪ್ರಶ್ನೆ	ಉತ್ತರ
		3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಿರುತ್ತದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ. 4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ. ಏಪ್ರಿಲ್ 2020 ತಿಂಗಳ ಕಂತು — ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು ಮೇ 2020 ತಿಂಗಳ ಕಂತು — ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು ಜೂನ್ 2020 ತಿಂಗಳ ಕಂತು — ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು
(ಇ)	ರಾಜ್ಯದಲ್ಲಿ ಕಳೆದ ವರ್ಷದಿಂದ ಯಾವ ಯಾವ ಭಾಗಗಳಲ್ಲಿ ಬಂಡವಾಳ ಹೂಡಿಕೆಯಾಗಿದೆ? (ಪೂರ್ಣ ವಿವರ ನೀಡುವುದು).	2019-20 ನೇ ಸಾಲಿನಲ್ಲಿ ಹೊಸದಾಗಿ ಸ್ಥಾಪನೆ ಮಾಡಲು ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯಲ್ಲಿ ಅನುಮೋದನೆಗೊಂಡ ಯೋಜನೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಈ ಎಲ್ಲಾ ಯೋಜನೆಗಳು ಅನುಷ್ಠಾನ ಹಂತದಲ್ಲಿವೆ.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಪರಿಷತ್ ಪ್ರಶ್ನೆ ಸಂಖ್ಯೆ: 584 (505)– ಶ್ರೀ ಬಿ.ಜಿ.ಪಾಟೀಲ್ : ಅನುಬಂಧ–1

#	ಜಿಲ್ಲೆ	ಜರುಗಿದ ಏಕ ಗವಾಕ್ಷಿ ಸಮಿತಿ ಸಭೆಗಳು	ಅನುಮೋದನೆಗೊಂಡ ಯೋಜನೆಗಳು	ಬಂಡವಾಳ ಹೂಡಿಕೆ ರೂ.ಲಕ್ಷಗಳಲ್ಲಿ	ಉದ್ಯೋಗ ಅವಕಾಶ
1	ಬಾಗಲಕೋಟೆ	3	7	2,302.80	261
2	ಬೆಂಗಳೂರು ಗ್ರಾಮಾಂತರ	2	198	1,285.25	12,217
3	ಬೆಂಗಳೂರು ನಗರ	3	119	1,11,907.25	12,454
4	ಬೆಳಗಾವಿ	3	128	45,000.44	3,587
5	ಬಳ್ಳಾರಿ	2	85	22,848.32	5,207
6	ಬೀದರ	1	40	2,560.00	633
7	ಚಾಮರಾಜನಗರ	3	43	7,268.55	1,119
8	ಚಿಕ್ಕಬಳ್ಳಾಪುರ	2	30	10,647.85	1,321
9	ಚಿಕ್ಕಮಗಳೂರು	3	4	411.30	221
10	ಚಿತ್ರದುರ್ಗ	2	9	2,376.83	990
11	ದಕ್ಷಿಣ ಕನ್ನಡ	3	38	9,444.20	1,701
12	ದಾವಣಗೆರೆ	3	17	4,927.58	1,242
13	ಧಾರವಾಡ	2	32	4,058.21	567
14	ಗದಗ	5	17	4,568.59	279
15	ಹಾಸನ	1	3	554.00	99
16	ಹಾವೇರಿ	1	2	250.00	25
17	ಕಲಬುರುಗಿ	2	10	3,775.00	378
18	ಕೊಡಗು	2	4	1,026.25	465
19	ಕೋಲಾರ	1	84	33,175.00	3,423
20	ಕೊಪ್ಪಳ	2	13	4,336.98	245
21	ಮಂಡ್ಯ	2	10	1,252.01	563
22	ಮೈಸೂರು	3	416	65,641.34	8,062
23	ರಾಯಚೂರು	3	14	2,136.00	144
24	ರಾಮನಗರ	3	50	243.55	2,048
25	ಶಿವಮೊಗ್ಗ	3	86	12,640.96	1,846
26	ತುಮಕೂರು	3	234	67,623.39	11,453
27	ಉಡುಪಿ	4	49	10,101.43	1,805
28	ಉತ್ತರಕನ್ನಡ	2	3	425.96	80
29	ವಿಜಯಪುರ	4	11	1,620.28	247
30	ಯಾದಗಿರಿ	1	31	10,177.50	1,268
	ಒಟ್ಟು	**74**	**1,787**	**4,44,586.82**	**73,950**